5292 (5149) ಶ್ರೀ ಪಾಪರೆಡ್ಡಿ ಎ. : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರವು ರಚನೆಯಾಗಿ ಒಂದು ವರ್ಷವಾದರೂ (ಆಡಳಿತದಲ್ಲಿ) ಈವರೆಗೂ ಆರಾಧನಾ ಸಮಿತಿ, ಅಕ್ರಮ-ಸಕ್ರಮ ಸಮಿತಿ ಟ್ರಿಬ್ಯೂನಲ್ ಸಮಿತಿಗಳನ್ನು ರಚಿಸದಿರಲು ಕಾರಣಗಳೇನು:

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಳ್ಳುವ ಕ್ರಮವೇನು?

ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) (1) ಆರಾಧನಾ ಸಮಿತಿ:- ಈಗಾಗಲೇ 20 ಕ್ಷೇತ್ರಗಳಿಗೆ ಆರಾಧನಾ ಸಮಿತಿ ರಚಿಸಲಾಗಿದ್ದು, ಇನ್ನುಳಿದ ಕ್ಷೇತ್ರಗಳಿಗೂ ಶೀಘ್ರದಲ್ಲಿ ಸಮಿತಿ ರಚಿಸಲಾಗುವುದು.

(2) ಅಕ್ರಮ ಸಕ್ರಮ ಸಮಿತಿ:- ಅಕ್ರಮ ಸಕ್ರಮ ಸಮಿತಿಗಳ ನೇಮಕಾತಿಗಳಿಗೆ ಹೊಸ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಜಿಲ್ಲಾಧಿಕಾರಿಗಳಿಂದ ಹೊಸ ಪ್ರಸ್ತಾವನೆಗಳು ಸರ್ಕಾರಕ್ಕೆ ಬರುತ್ತಿದ್ದು, ಅವುಗಳು ಸರ್ಕಾರದ ತೀವ್ರ ಪರಿಶೀಲನೆಯಲ್ಲಿವೆ. ಈಗಾಗಲೇ 10 ಸಮಿತಿ ರಚಿಸಲಾಗಿದ್ದು, ಆದಷ್ಟೂ ಬೇಗನೆ ಉಳಿದ ಸಮಿತಿಗಳನ್ನು ರಚಿಸಲಾಗುವುದು.

(3) ಭೂನ್ಯಾಯ ಮಂಡಳಿ:- ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಭೂನ್ಯಾಯ ಮಂಡಳಿಗಳನ್ನು ಈಗಾಗಲೇ ರಚನೆ ಮಾಡಲಾಗಿದ್ದು, ಅವು ಅಸ್ತಿತ್ವದಲ್ಲಿದ್ದು, ಕಾರ್ಯನಿರ್ವಹಿಸುತ್ತಿವೆ.

ಆ) ಉದ್ಭವಿಸುವುದಿಲ್ಲ.

5293 (6158) ಶ್ರೀ ಪಾಟೀಲ್ ಡಿ. ಆರ್. (ಗದಗ) : ಮಾನ್ಯ ಉಪ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವ್ಯಾಟ್ ಅನುಷ್ಠಾನಗೊಳ್ಳುತ್ತಿರುವ ನಮ್ಮ ರಾಜ್ಯದಲ್ಲಿ ಮೊದಲ 3 ತಿಂಗಳ ಅವಧಿಯಲ್ಲಿ (ಏಪ್ರಿಲ್ 1 ರಿಂದ ಜೂನ್ 30) ವಾಣಿಜ್ಯ ತೆರಿಗೆ ಸಂಗ್ರಹದಲ್ಲಿ ಆದ ಹೆಚ್ಚಳ, ಇಲ್ಲವೇ ಕೊರತೆ ಎಷ್ಟು;

ಆ) ಇದು ಇಲಾಖೆ ನಿರೀಕ್ಷಿಸಿದ ಮಟ್ಟದಲ್ಲಿದೆಯೇ;

ಇ) ಇಲಾಖೆ ಈ ವರ್ಷದಲ್ಲಿ ವಾಣಿಜ್ಯ ತೆರಿಗೆ ಸಂಗ್ರಹದಲ್ಲಿ ಕಡಿತ ನಿರೀಕ್ಷಿಸುವುದೇ;

ಈ) ಇಲ್ಲವಾದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಯವರು)

ಅ) 2005, ಏಪ್ರಿಲ್ 1 ರಿಂದ ಜೂನ್ 30 ರವರೆಗಿನ ಅವಧಿಯಲ್ಲಿ ವಾಣಿಜ್ಯ ತೆರಿಗೆಗಳ ಒಟ್ಟು ಸಂಗ್ರಹಣೆಯಲ್ಲಿ ಕಳೆದ ವರ್ಷದ ಇದೇ ಅವಧಿಯಲ್ಲಿ ಆದ ಸಂಗ್ರಹಣೆಗಿಂತ ರೂ.597.66 ಕೋಟಿಗಳಷ್ಟು ಹೆಚ್ಚಿನ ಸಂಗ್ರಹಣೆ ಆಗಿರುತ್ತದೆ.

ಆ) ಹೌದು.

ಇ) ಇಲ್ಲ.

ಈ) ವ್ಯಾಟ್ ಜಾರಿಯಿಂದಾಗುವ ತೆರಿಗೆ ಆದಾಯ ನಷ್ಟವನ್ನು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಪೂರ್ಣವಾಗಿ ಕೇಂದ್ರ ಸರ್ಕಾರ ಭರಿಸುವುದರಿಂದ ಹಾಗೂ ವ್ಯಾಟೇತರ ತೆರಿಗೆಗಳ ಸಂಗ್ರಹಣೆ ಉತ್ತಮವಾಗಿರುವುದರಿಂದ, ವಾಣಿಜ್ಯ ತೆರಿಗೆಗಳ ಒಟ್ಟು ಸಂಗ್ರಹಣೆಯಲ್ಲಿ ಸಧ್ಯಕ್ಕೆ ಯಾವುದೇ ಕಡಿತ ನಿರೀಕ್ಷಿಸಲಾಗಿಲ್ಲ.

5294 (6159) ಶ್ರೀ ಪಾಟೀಲ್ ಡಿ. ಆರ್. (ಗದಗ) : ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 2001ರ ಜನಗಣತಿ ಪ್ರಕಾರ ಜಿಲ್ಲಾವಾರು ಅಲ್ಪಸಂಖ್ಯಾತರ ಜನಸಂಖ್ಯೆ ಎಷ್ಟು;

ಆ) ಅದರಲ್ಲಿ ಮುಸ್ಲಿಂ, ಕ್ರಿಶ್ಚಿಯನ್ ಜೈನ್, ಸಿಖ್ ಸಮುದಾಯದ ಜನಸಂಖ್ಯೆ ಎಷ್ಟು ಹಾಗೂ ಇದು ಒಟ್ಟು ಜನಸಂಖ್ಯೆಯ ಪ್ರಮಾಣ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು);

ಇ) ಅಲ್ಪಸಂಖ್ಯಾತರ ಸಾಕ್ಷರತ ಪ್ರಮಾಣ ಎಷ್ಟು; (ಜಿಲ್ಲಾವಾರು ಹಾಗೂ ಅಲ್ಪಸಂಖ್ಯಾತರ ಮತವಾರು ವಿವರ ನೀಡುವುದು);

ಈ) ಗದಗ್ ಜಿಲ್ಲೆಯಲ್ಲಿ ಮುಸ್ಲಿಂ ಜನಾಂಗ ಹೆಚ್ಚಿನ ಪ್ರಮಾಣದಲ್ಲಿದ್ದು ಅವರಿಗಾಗಿ ಒಂದು ವಸತಿ ಶಾಲೆಯನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ;

ಉ) ಹಾಗಿದ್ದಲ್ಲಿ, ಇದಕ್ಕೆ ಬೇಕಾಗಿರುವ ಕಾಲಾವಕಾಶ ಎಷ್ಟು?

ಶ್ರೀ ಜಬ್ಬರ್‌ಖಾನ್ ಹೊನ್ನಾಳಿ (ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಯುವಜನ ಸೇವಾ ಸಚಿವರು) :

ಅ) 2001ರ ಜನಗಣತಿ ಪ್ರಕಾರ ಜಿಲ್ಲಾವಾರು ಅಲ್ಪಸಂಖ್ಯಾತರ ಜನಸಂಖ್ಯೆಯ ವಿವರದ ಅನುಬಂಧ 'ಅ' ಅನ್ನು ಈ ಲಗತ್ತಿನೊಂದಿಗೆ ಲಗತ್ತಿಸಿದೆ.

ಆ) ಅನುಬಂಧ ಲಗತ್ತಿಸಿಲಾಗಿದೆ.

ಇ) ಮಾಹಿತಿ ಲಭ್ಯವಿರುವುದಿಲ್ಲ. ರಾಜ್ಯ ಅಲ್ಪಸಂಖ್ಯಾತರ ಆಯೋಗದವರು 1994ನೇ ಸಾಲಿನಲ್ಲಿ ಮಾಡಿದ ಸರ್ವೆಯಲ್ಲಿ ಇರುವ ಮಾಹಿತಿ ಅನುಬಂಧ 'ಆ'ನಲ್ಲಿ ಲಗತ್ತಿಸಿದೆ.

ಈ) ಈಗಾಗಲೇ ಗದಗ ಜಿಲ್ಲೆಗೆ ಒಂದು ವಸತಿ ಶಾಲೆ ಮಂಜೂರು ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆ. ಅದನ್ನು ಪರಿಶೀಲಿಸಲಾಗುವುದು.